ಸ್ವಲ್ಪ ಸ್ವಲ್ಪವಾಗಿ ಹೇಳುತ್ತಾ ಬಂದಳು. ವಿಲಿಯಮ್‌ಗೆ ಹುಡುಗಿಯರ ಮೋಹ ವಿಪರೀತ. ಯಾರನ್ನೂ ಬಿಡುವವನಲ್ಲ. ಅವನ ಕಾಟ ತಾಳಲಾರದೆ ಅನೇಕರು ಕೆಲಸ ಬಿಟ್ಟು ಹೋಗಿದ್ದಾರೆ. ಹೀಗೆ ಸಿಕ್ಕಿಬಿದ್ದ ಒಬ್ಬಳು ಈವಾನ್. ಅವಳನ್ನೇ ಅವನು ಮದುವೆಯಾದ. ಇಬ್ಬರು ಮಕ್ಕಳು. ಈಗ ಅವರಿಬ್ಬರ ಸಂಬಂಧ ಕಹಿಯಾಗಿದೆ. ಅವಳು ಡೈವೋರ್ಸ್ ಬಯಸಿ ಕೇಸ್ ಹಾಕಿದ್ದಾಳೆ. ವಿಚ್ಛೇದನ ಈಗ ಸಿಕ್ಕಿರಬಹುದು. ಮನೆಯಲ್ಲಿ ಇವನೊಬ್ಬನೇ . ಹೀಗಾಗಿ ಇಲ್ಲಿ ಇವನ ಕಾಟ ಮಿತಿ ಮೀರಿದೆ.

ಒಂದು ನೆನಪಿರಲಿ. ಅವನು ರಾತ್ರಿ ಎಂಟರ ಹೊತ್ತಿಗೆ ಮನೆಗೆ ಹೋಗುತ್ತಾನೆ. ಆ ಸಮಯದಲ್ಲಿ ಏನೇ ಆದರೂ ಒಬ್ಬಳೇ ಇಲ್ಲಿ ಇರಬೇಡ. ಯಾರಾದರೂ ಗಂಡಸರು ಇನ್ನೂ ಇಲ್ಲಿಯೇ ಇದ್ದರೆ ಪರವಾಗಿಲ್ಲ. ಹುಡುಗಿಯರು ಇದ್ದರೂ ಸರಿಯೇ. ಒಬ್ಬಳೇ ಮಾತ್ರ ಇರಬೇಡ. ಹೆಚ್ಚಿನ ಕೆಲಸ ಇದ್ದರೆ ಬೆಳಗ್ಗೆ ಬೇಗ ಬಂದು ಮಾಡು. ಆದಷ್ಟೂ ಅವನ ಕೊಠಡಿಗೆ ಒಬ್ಬಳೇ ಹೋಗಬೇಡ. ಹೋಗಬೇಕಾಗಿ ಬಂದರೆ ಒಳಹೋಗಿ ಬಾಗಿಲು ಹಾಕಿಕೊಳ್ಳಬೇಡ.''

ಈ ಬುದ್ಧಿವಾದದ ಮಹತ್ವ ನಯನಾಳಿಗೆ ಹೊಳೆಯಲೇ ಇಲ್ಲ. ಒಳಗೊಳಗೇ ನಕ್ಕಳು ಅವಳು - ಈ ಅರವತ್ತು ವರ್ಷದ ಮುದುಕಿ ನನಗೇ ಬುದ್ಧಿ ಹೇಳ್ತಾಳೆ. ಅವಳ ತಿಳಿವಳಿಕೆ ಮಾತನ್ನು ಸವಾಲು ಎಂದು ಭಾವಿಸಿದಳು. ನೋಡಿಯೇ ಬಿಡುತ್ತೇನೆ ಎಂದು ಶಪಥ ಮಾಡಿಕೊಂಡಳು.

ಅಂದಿನಿಂದ ನಯನಾ ರಾತ್ರಿ ಎಂಟರ ಮುಂಚೆ ಪ್ರಯೋಗಾಲಯ ಬಿಟ್ಟದ್ದೇ ಇಲ್ಲ ಎನ್ನಬಹುದು. ಮೊದಲವಾರ ಅಲ್ಲಿ ಇನ್ನೂ ಕೆಲವರು ಕೆಲಸ ಮಾಡುತ್ತಿದ್ದರು. ಟರ್ನರ್ ಮನೆಗೆ ಹೋಗಿದ್ದನ್ನು ಎರಡು ಬಾರಿ ನೋಡಿದಳು. ಮಿಕ್ಕ ಮೂರೂ ದಿನ ಅವನು ಊರಿನಲ್ಲಿ ಇರಲಿಲ್ಲ. "ಇದೇನು ಸ್ಟೆಲ್ಲಾ ಅಷ್ಟೊಂದು ಹೇಳಿದಳು" ಎನ್ನಿಸಿತು.

ಆದರೆ, ಆ ಬುಧವಾರ ವಿಶೇಷವಾಯಿತು. ಏಳೂಮುಕ್ಕಾಲರ ಸಮಯ. ಪ್ರಯೋಗಾಲಯದಲ್ಲಿ ಇವಳೊಬ್ಬಳೇ. ತನ್ನ ಕೊಠಡಿಯ ಬಾಗಿಲನ್ನು ತೆರೆದುಕೊಂಡು ಟರ್ನರ್ ಹೊರಬಂದ. ಸುತ್ತಾ ನೋಡಿ ಇವಳ ಬಳಿಯೇ ಬಂದ.

"ಏನು ನಯನಾ, ಇನ್ನೂ ಮನೆಗೆ ಹೋಗಿಲ್ಲವೇ?"

"ಏನೋ ಒಳ್ಳೆ ರಿಸಲ್ಟ್ ಬರ್ತಾ ಇತ್ತು. ಅದಕ್ಕೆ ಇಲ್ಲೇ ಇದ್ದೆ. ಇನ್ನೇನು ಹೊರಟೆ."

"ವೆರಿ ಗುಡ್"

ಸ್ವಲ್ಪ ದೂರ ಹೋದವನೇ ಹಿಂದೆ ಬಂದ.

"ಟ್ರೈನ್ ಸ್ಟೇಷನ್ ಅಥವಾ ಬಸ್ ಸ್ಟಾಪಿಗೆ ಬಿಡಲೇ?"

"ಬೇಡ ಪ್ರೊಫೆಸರ್ ಟರ್ನರ್. ನಾನೇ ಹೋಗ್ತಿನಿ, ಪರವಾಗಿಲ್ಲ."

"ನನ್ನನ್ನ ಪ್ರೊಫೆಸರ್ ಅಂತ ಕರೆಯೋದು ಬೇಡ. ವಿಲಿಯಮ್ ಅನ್ನು ಸಾಕು. ಬೈ , ಗುಡ್ ನೈಟ್ "

ನಂತರ ನಯನಾ ತನ್ನನ್ನು ತಾನೇ ಶಪಿಸಿಕೊಂಡಳು. ಸ್ಟೇಷನ್ ಏನೇನೂ ಹತ್ತಿರವಿರಲಿಲ್ಲ. ಅವನೊಡನೆ ಕಾರಿನಲ್ಲಿ ಹೋಗುವ ಅವಕಾಶ ತಪ್ಪಿತು ಎಂದುಕೊಂಡಳು.

ಮುಂದಿನ ಸೋಮವಾರ ನಯನಾ ಎಂಟರವರೆಗೆ ಅಲ್ಲಿಯೇ ಇದ್ದಳು. ಅವನು ಬಂದು ಸ್ಟೇಷನ್ನಿಗೆ ಬೇಕಾದರೆ ಬಿಡುತ್ತೇನೆ, ಎಂದ. ಇವಳು "ನಿಮಗೆ ತೊಂದರೆಯಾಗದಿದ್ದರೆ'' ಎಂದಳು. ಅಂದು ಸ್ಟೇಷನ್ನಿನಲ್ಲಿ ಇಳಿದು ಟ್ರೈನ್ ಹತ್ತಿದಳು. ಮುಂದಿನ ಅವಕಾಶ ಸಿಕ್ಕಾಗ ತುಂತುರು ಮಳೆ ಬೇರೆ. ಅವನು "ಟ್ರೈನ್ ಏಕೆ, ಮನೆ ಎಲ್ಲಿದೆ ಹೇಳು, ಅಲ್ಲಿಯೇ ಬಿಡುತ್ತೇನೆ." ಎಂದ.

"ನಮ್ಮ ಮನೆ ದೂರ. ಬರ್ವುಡ್ಡಿನಲ್ಲಿದೆ" ಎಂದಳು ಇವಳು.

"ಅದೇನು ಮಹಾ ದೂರ? ನಾನು ಮನೆಗೆ ಹೋಗುವ ಹಾದಿಯಲ್ಲಿಯೇ ಇದೆ'' ಎಂದ ಇವನು. ಅವಳನ್ನು ಅವನೇ ಮನೆಮುಟ್ಟಿಸಿದ.

ಅಂದು ಶುಕ್ರವಾರ. ಅವಳು ಮಾತಾಡದೇ ಟರ್ನರ್ ಜೊತೆ ಹೊರಟಳು.

"ಇವತ್ತು ಶುಕ್ರವಾರ. ಎಲ್ಲಾದರೂ ಸ್ವಲ್ಪ ಡ್ರಿಂಕ್ಸ್ ಹಾಕುವ ಅಭ್ಯಾಸ ನನಗೆ. ನೀನೂ ಏಕೆ ಬರಬಾರದು? ಡ್ರಿಂಕ್ಸ್ ಅಭ್ಯಾಸ ಇದೆಯಾ?"

"ಇಲ್ಲ ಎನ್ನ ಬೇಕು. ಒಮ್ಮೊಮ್ಮೆ ಸ್ವಲ್ಪ ವೈನ್ ಕುಡಿದಿದ್ದೇನೆ ಅಷ್ಟೇ."

ಅಂದು ಅವನು ಸ್ಕಾಚ್ ಕುಡಿದ. ಇವಳು ತುಸು ವೈನ್ ಸೇವಿಸಿದಳು. ಮನೆ ಸೇರಿದಾಗ ರಾತ್ರಿ ಹನ್ನೊಂದು. ಅಪ್ಪ ಅಮ್ಮ ಹಲವಾರು ಬಾರಿ ಫೋನ್ ಮಾಡಿದ್ದರು. ಇವಳು